# ಎರಡನೇ ಸಂಕಲನಾತ್ಮಕ ವಾರ್ಷಿಕ ಪರೀಕ್ಷೆ 2013–14

**ವಿಷಂಯ: ಸಮಾಜ ವಿಜ್ಞಾನ** **ಸರ್ಕಾರಿ ಪ್ರೌಢಶಾಲೆ ಬಗ್ಗವಳ್ಳಿ**

**ಸಮಂಯ: –3.00**

**ತರಗತಿ: 9ನೇ** **ಅಂಕಗಳು– 90+10**

## A ವಿಭಾಗ [ಅಂಕಗಳು20]

**(ವಿದ್ಯಾರ್ಥಿಗಳಿಗೆ ಪಠ್ಯಗಳಿಗೆ ಹೋರತಾಗಿ ಹೆಚ್ಚಿನ ಜ್ಞಾನ)**

**I. ಈ ಕೆಳಗಿನ ಪ್ರಭಂದವನ್ನು ಓದಿ ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ 5x1=5**

**[1893 ರಲ್ಲಿ ನಡೆದಿದ್ದು ಮೊದಲ 9/11. ಚಿಕಾಗೋದಲ್ಲಿ ಮೊದಲ ಸರ್ವಧರ್ಮ ಸಮ್ಮೇಳನ ನಡೆಯಿತು. ಸನಾತನ ಹಿಂದೂ ಧರ್ಮವನ್ನು ಪ್ರತಿನಿಧಿಸಿ ಭಾರತದಿಂದ ಹೋಗಿದ್ದ ಸ್ವಾಮಿ ವಿವೇಕಾನಂದರಷ್ಟು ಪ್ರಖರವಾಗಿ ಆ ವಿಷಯದ ಮೇಲೆ ಬೆಳಕು ಚೆಲ್ಲಿದವರು ಮತ್ತ್ಯಾರೂ ಇರಲಿಲ್ಲ. .'1893 ರ ಸೆಪ್ಟೆಂಬರ್ 27 ಈ ಸರ್ವಧರ್ಮ ಸಮ್ಮೇಳನದ ಸಮಾರೋಪದ ದಿನವಾಗಿತ್ತು. ಆಗಲೂ ಈ ಸಭೆ ಜಗತ್ತಿಗೆ ತೋರಿಸಿದ್ದು ಏನನ್ನು ಎಂಬುದರ ಬಗ್ಗೆ ಸ್ವಾಮೀಜಿ ಮಾತನಾಡಿದರು– 'ಪೂಜ್ಯತೆ, ಪರಿಶುದ್ಧತೆ ಹಾಗೂ ಔದಾರ್ಯಗಳು ಜಗತ್ತಿನ ಯಾವುದೇ ಚರ್ಚ್‌ಗಳ ಜಹಗೀರಲ್ಲ. ಪ್ರತಿ ವ್ಯವಸ್ಥೆಯೂ ಉನ್ನತ ವ್ಯಕ್ತಿತ್ವದ ಪುರುಷ-ಸ್ತ್ರೀಯರನ್ನು ಸೃಷ್ಟಿಸಿದೆ. ಈ ಸಾಕ್ಷ್ಯ ಎದುರಿಗಿದ್ದಾಗಲೂ ಯಾರಾದರೂ ತಮ್ಮ ಮತ ಮಾತ್ರವೇ ವಿಕಸಿಸಬೇಕು ಹಾಗೂ ಉಳಿದವು ನಾಶವಾಗಬೇಕು ಎಂಬ ಕನಸಿನಲ್ಲಿದ್ದರೆ ಅಂಥವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಬಹುದಷ್ಟೆ ಅಲ್ಲದೇ, ಪ್ರತಿ ಧರ್ಮದ ಉದ್ಘೋಷದಲ್ಲೂಪ್ರತಿರೋಧಕ್ಕೆ ಬದಲಾಗಿ, 'ಸಹಕಾರವಿರಲಿ, ಸಂಘರ್ಷ ಬೇಡ,' ಕಟ್ಟುವಿಕೆ ಇರಲಿ, ಕೆಡುವುವುದು ಬೇಡ', 'ಸಮರಸ ಹಾಗೂ ಶಾಂತಿಯೇ ಹೊರತು ಭೇದವಲ್ಲ' ಎಂಬ ಸಂದೇಶಗಳೇ ಇವೆ ಎಂದು ಅಂಥವರಿಗೆ ತಿಳಿಯಪಡಿಸುತ್ತೇನೆ'.]**

1. ಜಾಗತಿಕ ಮಟದಲ್ಲಿ ಮೋದಲ ಸರ್ವಧರ್ಮ ಸಮ್ಮೇಳನ ಯಾವಾಗ ನಡೆಯಿತು ,
   ಅ) 27/11/1999 ಬ) 6/11/1968 ಕ) 9/11/1989 ಡ) 11/09/1989
2. ಚಿಕಾಗೋದಲ್ಲಿನ ಸರ್ವಧರ್ಮ ಸಮ್ಮೇಳನಕ್ಕೆ ಭಾರತದಿಂದ ಯಾರು ಭಾಗವಹಿಸಿದ್ದರು,
   ಅ) ಮುಮ್ಮಡಿ ಕೃಷ್ಣರಾಜ ಓಡೆಯರ್ ಬ) ವಿಶ್ವಾ ಮಿತ್ರ ಕ) ಅಂಬೇಡ್ಕರ್ ಡ) ಸ್ವಾಮಿ ವಿವೇಕಾನಂದ.
3. ಯಾವುವು ಜಗತ್ತಿನ ಯಾವುದೇ ಚರ್ಚಿನ ಜಹಗೀರಲ್ಲ ,
   ಅ) ಪೂಜ್ಯತೆ ಬ) ಔದಾರ್ಯತೆ ಕ) ಪರಿಶುದ್ದತೆ ಡ) ಎಲ್ಲವು
4. ಪ್ರತಿ ಧರ್ಮದ ಉದ್ಘೋಷದಲ್ಲೂಪ್ರತಿರೋಧಕ್ಕೆ ಬದಲಾಗಿ,
   ಅ) ಸಹಕಾರ ವಿರಲಿ ಬ) ಸಂಘರ್ಷವಿರಲಿ ಕ) ವಿಷಾಲ ಮನೋಭಾವಿರಲಿ ಡ) ಕೆಡಕು ಇರಲಿ
5. ಈ ಗದ್ಯದಿಂದ ನಿಮಗೆ ಏನು ತಿಳಿಯುತ್ತದೆ ಎಂದರೆ,
   ಅ) ಹಿಂದೂ ಧರ್ಮದ ವಿಶಾಲತೆ ಬ) ಸರ್ವ ಧರ್ಮ ಸಮಾನತೆ ಕ) ಭಾರತದ ಉದಾರತೆ ಡ) ಜಾತ್ಯಾತೀತತೆ

**II. ಈ ಕೆಳಗಿನ ಪ್ರಭಂದವನ್ನು ಓದಿ ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ**

**5x1=5** **ಅಕ್ಬರನ ಕಾಲದಲ್ಲಿ ಮುಘಲ್ ಸಾಮ್ರಾಜ್ಯದಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ಇದ್ದರು. ಅಕ್ಬರನು ಸಿಂಹಾಸನವನ್ನೇರಿದ ಕಾಲದಲ್ಲಿ ಮುಘಲ್ ಸಾಮ್ರಾಜ್ಯದಲ್ಲಿ ಹಿಂದೂಗಳು ಬಹುಸಂಖ್ಯೆಯುಲ್ಲಿದ್ದರು. ಆದರೆ ಆಡಳಿತಗಾರರು ಎಲ್ಲರೂ ಮುಸ್ಲಿಮರಾಗಿದ್ದರು. ಇಂತಹ ಧ್ರುವೀಕೃತ ಕಾಲದಲ್ಲಿ ಅಕ್ಬರನು ಧರ್ಮ ಸಹಿಷ್ಣುತೆಯನ್ನು ಪ್ರೋತ್ಸಾಹಿಸಿದನು. ಹಿಂದೂ ಗಳನ್ನು ಉನ್ನತಹುದ್ದೆಗಳಿಗೆ ಏರಿಸಿದನು. ಜಝಿಯಾ ಕರವನ್ನು ರದ್ದು ಪಡಿಸಿದನು. ಕ್ಯಾಥೊಲಿಕ್ ಚರ್ಚಿನ ಜೊತೆಗೂ ಒಳ್ಳೆ ಸಂಬಂಧ ಹೊಂದಿದ್ದ ಅಕ್ಬರ್ ತನ್ನ ಮೂರು ಮೊಮ್ಮಕ್ಕಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಿದನು. (ಇವರು ನಂತರ ಮು ಸ್ಲಿಮರಾಗಿ ಮತಾಂತರ ಹೊಂದಿದರು) ಅಕ್ಬರನು *ಇಬಾದತ್ ಖಾನಾ* ಎಂಬ ಕಟ್ಟಡವನ್ನು ಕಟ್ಟಿಸಿದನು. ಇದರಲ್ಲಿ ಧಾರ್ಮಿಕ ತರ್ಕಗಳನ್ನು ಏರ್ಪಡಿಸುತ್ತಿದ್ದನು. ಇಸ್ಲಾಮೀಯ ಸೂಫಿ ಪಂಥ ಮತ್ತು ಹಿಂದೂ ಧರ್ಮದ "ಭಕ್ತಿ" ಪಂಥಗಳನ್ನು ಆಧರಿಸಿ ದಿನ್-ಇ-ಇಲಾಹಿ ಎಂಬ ಧರ್ಮವನ್ನು ಹುಟ್ಟುಹಾಕಿದನು. ಇವನ ಧಾರ್ಮಿಕ ನಂಬಿಕೆಯನ್ನು ಕಟ್ಟಾ ಮುಸ್ಲಿಮರು ಸಹಿಸಲಿಲ್ಲ. ಇವರು ಅಕ್ಬರನ ವಿರುದ್ಧ ಬಹಳಷ್ಟು ಗಾಳಿಸುದ್ದಿಯನ್ನು ಹಬ್ಬಿಸಿದರು. ಹಿಂದೂ-ಮುಸ್ಲಿಮ್ ಭಾವೈಕ್ಯತೆಗಾಗಿ ಇಷ್ಟು ದುಡಿದರೂ ಕೊನೆಗೆ ೧೬ನೇ ಶತಮಾನದ ಅಂಚಿನಲ್ಲಿ ಈ ಸಂಬಂಧಗಳು ಬಹಳಷ್ಟು ಹಳಸಿದವು. ಅಕ್ಬರನು ಬಾಲ್ಯ ವಿವಾಹ ಮತ್ತು ಸತಿಯ ವಿರುದ್ಧ ರಾಜಾದೇಶವನ್ನು ಹೊರಡಿಸಿದನು.**

6. ಧಾರ್ಮಿಕ ಸಹಿಷ್ಣತೆ ವಿಷಯದಲ್ಲಿ ರಾಜ ಅಕ್ಬರನಿಗೆ ಈ ಕೆಳಗಿನ ಯಾವ ವ್ಯಕ್ತಿಗೆ ಹೋಲಿಸಬಹುದು.
   ಅ) ಅರವಿಂದ ಕೇಜ್ರವಾಲ್ ಬ) ನರೇಂದ್ರ ಮೋದಿ ಕ) ಮಮತಾ ಬ್ಯಾನರ್ಜಿ ಡ) ರಾಹುಲ್ ಗಾಂಧಿ
7. ಅಕ್ಬರನ ಕಾಲದಲ್ಲಿ ಆಡಳಿತಗಾರರು ಹೆಚ್ಚಿನವರು ಮುಸ್ಲೀಮರಾಗಿದ್ದರು ಆದರೆ ಬಹುಸಂಖ್ಯಾರು ಯಾರಾಗಿದ್ದರೆಂದರೆ ,
   ಅ) ಕ್ಯಾತೋಲಿಕ್ ಕ್ರೈಸ್ತರು ಬ) ಹಿಂದುಗಳು ಕ) ಸೂಫಿ ಭಕ್ತಿದಾರರು ಡ) ಸಿಖ್ಖ್ ಸಮುದಾಯದವರು
8. ಧಾರ್ಮಿಕ ತರ್ಕಗಳನ್ನು ಏರ್ಪಡಿಸಲು ಅಕ್ಬರನು ಯಾವ ಕಟ್ಟಡವನ್ನು ನಿರ್ಮಿಸಿದನು?
   ಅ) ತಾಜಮಹಲ್ ಬ) ಇಬಾದತಾ ಖಾನ್ ಕ) ಪಂಚ ಮಹಲ್ ಡ) ಬುಲಂದ್ ದರ್ವಾಜ

9. ಮೊನಾಲಿಸ ಮತ್ತು ಲಾಸ್ಟ್ ಸಪ್ಪರ್ ವರ್ಣಚಿತ್ರಗಳನ್ನು ರಚಿಸಿದ ವರ್ಣಚಿತ್ರಕಾರ ಲಿಯೋನಾರ್ಡೊ ಡಾ ವಿಂಚಿ ಮೊಘಲರ ಕಾಲದಲ್ಲಿ ವರ್ಣಚಿತ್ರ ಕ್ಕೆ ಪ್ರೋತ್ಸಾಹಿಸಿದವನು.

ಅ) ಮೈಕೆಲೆಂಜಲೊ ಬ) ಅಕ್ಬರ ಕ) ಷಹಜಹನ್ ಡ) ಜಹಂಗೀರ್

10. ಅಕ್ಬರನ ಕಾಲದಲ್ಲಿ ರಾಜಾದೇಶ ಹೊರಡಿಸುವಷ್ಟು ರೂಡಿಯಲ್ಲಿದ್ದ ಅನಿಷ್ಠ ಪದ್ದತಿಗಳಾವುವೆಂದರೆ,

ಅ) ಬಾಲ್ಯ ವಿವಾಹ ಮತ್ತು ಸತಿಸಹಗಮನ ಬ) ಸಮಾಜವಾದಿ ಮತ್ತು ಬಂಡವಾಳಶಾಹಿ

ಕ) ಜಾತಿ ಮತ್ತು ವರ್ಣಪದ್ದತಿ ಡ) ವಿಗ್ರಹ ಆರಾಧನೆ ಮತ್ತು ಬಹುದೇವತಾ

## III. ಈ ಕೆಳಗಿನ ಪ್ರಭಂದವನ್ನು ಓದಿ ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ 5x1=5

**ಕಾವೇರಿ ಕರ್ನಾಟಕದ ಜೀವನದಿ. ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟದಲ್ಲಿ ತಲಕಾವೇರಿಯೆಂಬ ಸ್ಥಳದಲ್ಲಿ ಉಗಮಿಸುವ ಈ ನದಿ, ಮೈಸೂರು ಜಿಲ್ಲೆಯ ಮೂಲಕ ತಮಿಳುನಾಡಿಗೆ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಮುಖ್ಯವಾಗಿ ದಕ್ಷಿಣ-ಪೂರ್ವ ದಿಶೆಯಲ್ಲಿ ಹರಿಯುವ ಈ ನದಿಯ ಪಥ ಸುಮಾರು ೭೬೫ ಕಿ.ಮಿ.ಗಳಷ್ಟು ಉದ್ದವಾಗಿದೆ. ಕಾವೇರಿ ಜಲಾನಯನ ಪ್ರದೇಶ ೨೭,೭೦೦ ಚದುರ ಮೈಲಿಗಳಷ್ಟಿದ್ದು ಕಾವೇರಿಯ ಉಪನದಿಗಳಲ್ಲಿ ಶಿಂಶಾ, ಹೇಮಾವತಿ, ಅರ್ಕಾವತಿ, ಕಪಿಲಾ, ಕಬಿನಿ, ಲಕ್ಷ್ಮಣ ತೀರ್ಥ ಮತ್ತು ಲೋಕಪಾವನಿ ನದಿಗಳನ್ನು ಹೆಸರಿಸಬಹುದು. ಕಾವೇರಿ 'ದಕ್ಷಿಣ ಗಂಗೆ'ಯೆಂದು ಪ್ರಸಿದ್ಧಿ ಪಡೆದ ಕರ್ನಾಟಕದ ಮಹಾನದಿ. ತುಲಾಮಾಸದಲ್ಲಿ ಕಾವೇರಿ ಸ್ನಾನ ಮಾಡಿದರೆ ಸಕಲ ಪಾಪಗಳೂ ನಾಶವಾಗುವುದೆಂಬ ನಂಬಿಕೆಯಿದೆ. ಕೊಡಗರು ಕಾವೇರಿಯನ್ನು ತಮ್ಮ ಕುಲದೈವದಂತೆ ಪೂಜಿಸುತ್ತಾರೆ. ಕಾವೇರಿಯು ಪುರಾಣಗಳಲ್ಲಿ ವರ್ಣಿಸಲಾದ ಸಪ್ತ ಪುಣ್ಯ ನದಿಗಳಲ್ಲಿ ಒಂದು, ಹಾಗೂ ದಕ್ಷಿಣದಲ್ಲಿರುವ ಏಕೈಕ ಮಹಾ ನದಿ. ಕೊಡಗಿನ ಬಳಿಯ ಬೆಟ್ಟಗಳನ್ನು ಬಿಟ್ಟ ನಂತರ ಕಾವೇರಿ ನದಿ ದಕ್ಷಿಣ ಪ್ರಸ್ಥಭೂಮಿಯ ಮೇಲೆ ಪೂರ್ವಕ್ಕೆ ಹರಿಯುತ್ತದೆ. ಈ ನದಿಯಲ್ಲಿ ಮೂರು ದ್ವೀಪಗಳಿವೆ - ಕರ್ನಾಟಕದಲ್ಲಿ ಶ್ರೀರಂಗಪಟ್ಟಣ ಮತ್ತು ಶಿವನಸಮುದ್ರ, ಹಾಗೂ ತಮಿಳುನಾಡಿನಲ್ಲಿ ಶ್ರೀರಂಗ. ಶಿವನಸಮುದ್ರದಲ್ಲಿ ಈ ನದಿ ೩೨೦ ಅಡಿಗಳ ಎತ್ತರದಿಂದ ಧುಮುಕಿ, ಗಗನಚುಕ್ಕಿ ಮತ್ತು ಭರಚುಕ್ಕಿ ಎಂಬ ಜಲಪಾತಗಳನ್ನು ಸೃಷ್ಟಿಸುತ್ತದೆ. ಭಾರತದ ಮೊದಲ ಜಲವಿದ್ಯುದಾಗಾರ ಇಲ್ಲಿ ೧೯೦೨ ರಲ್ಲಿ ಕಟ್ಟಲ್ಪಟ್ಟು ಬೆಂಗಳೂರು ನಗರಕ್ಕೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿತ್ತು. ಹೊಗೇನಕಲ್ ಜಲಪಾತವಾಗಿ ಬಿದ್ದಾದ ಮೇಲೆ ತಮಿಳುನಾಡನ್ನು ಪ್ರವೇಶಿಸುವ ಈ ನದಿ, ತಂಜಾವೂರು ಜಿಲ್ಲೆಯ ಮುಖಾಂತರ ಹರಿದು ಕೊನೆಗೆ ಇಬ್ಭಾಗವಾಗಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ.**

11. ದೋಣಿಯ ಮೂಲಕ ನಾವು ತಲಕಾವೇರಿಯಿಂದ ಕಾವೇರಿ ನದಿಯಲ್ಲಿ ಪ್ರಯಾಣ ಪ್ರಾರಂಭಿಸಿದರೆ, ನಾವು ಯಾವ ಸಮುದ್ರವನ್ನು ಸೇರುತ್ತೇವೆ?

ಅ) ಅರಬ್ ಕೊಲ್ಲಿ ಬ) ಬಂಗಾಳ ಕೊಲ್ಲಿ ಕ) ಹಡ್ಸನ್ ಕೊಲ್ಲಿ ಡ) ಮನ್ನಾರ್ ಖಾರಿ

12. ಕೆಳಗಿನವುಗಳಲ್ಲಿ ಯಾವುದು ಕಾವೇರಿ ನದಿಯ ಉಪನದಿ ಅಲ್ಲ,

ಅ) ಶಂಶಾ ಬ) ಲೋಕಪಾವನಿ ಕ) ಲಕ್ಷ್ಮಣ ತೀರ್ಥ ಡ) ಕಾಳಿ

13. ಕಾವೇರಿ ನದಿ ಯಾವ ಹೆಸರಿನಿಂದ ಪ್ರಸಿದ್ಧವಾಗಿದೆ.

ಅ) ಉತ್ತರ ಗಂಗೆ ಬ) ಪಶ್ಚಿಮ ಗಂಗೆ ಕ) ದಕ್ಷಿಣ ಗಂಗೆ ಡ) ಪೂರ್ವ ಗಂಗೆ

14. ಕಾವೇರಿನದಿ ಮೂರು ದ್ವೀಪಗಳನ್ನು ಸೃಷ್ಟಿಸುತ್ತದೆ. ದ್ವೀಪ ಎಂದರೆ

ಅ) ಸುತ್ತಲು ನೀರಿನಿಂದ ಆವೃತ್ತ ಪ್ರದೇಶ ಬ) 3 ಕಡೆ ನೀರಿನಿಂದ ಆವೃತ್ತ ಪ್ರದೇಶ

ಕ) ಸುತ್ತಲು ಭೂಮಿ ನಡುವೆ ನೀರಿರುವ ಪ್ರದೇಶ ಡ) ಜಲಸಂಧಿ

15. ಕರ್ನಾಟಕ ಮತ್ತು ತಮಿಳುನಾಡನ್ನು ಬೇರ್ಪಡಿಸುವ ಜಲಪಾತ ಯಾವುದು?

ಅ) ಶಿವನ ಸಮುದ್ರ ಬ) ಜೋಗ ಜಲಪಾತ ಕ) ಹೊಗೆನೆಕಲ್ ಡ) ಅಬ್ಬಿ ಜಲಪಾತ

## IV. ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ 5x1=5

| ಕ್ರಮ ಸಂಖ್ಯೆ | ದೇಶಗಳು | ವಿಸ್ತೀರ್ಣ | ಜನಸಂಖ್ಯೆ (ಶತಕೋಟಿಗಳಲ್ಲಿ) | ಜನಸಾಂದ್ರತೆ | ಲಿಂಗಾನುಪಾತ | ಸಾಕ್ಷರತೆ % | ಅಭಿವೃದ್ಧಿ |
|---|---|---|---|---|---|---|---|
| 2 | ಆಸ್ಟ್ರೇಲಿಯ | 2,45,712 | 13.4 | 65 | 999 | 97 % | 100 |
| 3 | ಆರ್ಮನಿ | 86,951 | 22.9 | 482 | 1013 | 96 % | 100 |
| 4 | ಭಾರತ | 1,32,263 | 123.8 | 327 | 982 | 76 % | 67 |
| 5 | ಸ್ವಿಟ್ಜರ್ ಲ್ಯಾಂಡ್ | 23,605 | 1.6 | 1287 | 1023 | 99 % | 100 |
| 6 | ಬ್ರಿಜೀಲ್ | 1,96,835 | 86.7 | 178 | 875 | 73 % | 81 |
| 8 | ಚೀನಾ | 3,00,618 | 137.4 | 165 | 1073 | 87 % | 94 |

16. ಮೇಲಿನ ಕೋಷ್ಟಕದನ್ವಯ ಹೆಚ್ಚು ಅಭಿವೃದ್ಧಿ ಸಾಧಿಸಿರುವ ಮೂರು ದೇಶಗಳಾವುವು?

17. ಜನಸಾಂದ್ರತೆ ಎಂದರೇನು? ಕೊಷ್ಟಕದನ್ವಯ ಹೆಚ್ಚು ಜನಸಾಂದ್ರತೆ ಹೊಂದಿರುವ ದೇಶ ಯಾವುದು?

18. ಕೋಷ್ಟಕದನ್ವಯ ಭಾರತ ಜನಸಂಖ್ಯೆಯಲ್ಲಿ ಎಷ್ಟನೆ ಸ್ಥಾನ ಪಡೆದಿದೆ?

19. ವಿಸ್ತೀರ್ಣ ಹಾಗು ಲಿಂಗಾನುಪಾತ ಹೆಚ್ಚಾಗಿರುವ ದೇಶ ಯಾವುದು?

20. ಭಾರತಕ್ಕೆ ಹೋಲಿಸಿದರೆ ಲಿಂಗಾನುಪಾತ ಕಡಿಮೆ ಇರುವ ಸಾಕ್ಷರತೆ ಹೆಚ್ಚಿರುವ ದೇಶಯಾವುದೆಂದರೆ,

ಅ) ಆಸ್ಟ್ರೇಲಿಯ ಬ) ಜರ್ಮನಿ ಕ) ಬ್ರಿಜೀಲ್ ಡ) ಚೀನಾ

# B ವಿಭಾಗ [ಅಂಕಗಳು 45]

**(ವಿದ್ಯಾರ್ಥಿಗಳಿಗೆ ಪಠ್ಯಗಳಿಗೆ ಸಂಭಂದಿಸಿದ ಜ್ಞಾನ)**

## V. ಈ ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಗಳಲ್ಲಿ ಸರಿಯಾದ ಉತ್ತರ ಆರಿಸಿ ಬರೆಯಿರಿ

**4x1=4**

21. 9 ರಿಂದ 14 ನೇ ಶತಮಾನದಲ್ಲಿ ದೇಹಲಿ ಸುಲ್ತಾನರಲ್ಲಿ ಆಳ್ವಿಕೆ ನಡೆಸಿದ ಪ್ರಥಮ ಮಹಿಳೆ ಯಾರೆಂದರೆ,
    - ಅ) ಜೋದಾಬಾಯಿ
    - ಬ) ಲಕ್ಷ್ಮೀಬಾಯಿ
    - ಕ) ದುರ್ಗಾವತಿದೇವಿ
    - ಡ) ರಜಿಯಾ ಸುಲ್ತಾನ್
22. ಭಾರತೀಯ ಸಮಾಜದ ಆಧಾರ ಸ್ಥಂಭ ಎಂದರೆ
    - ಅ) ಗ್ರಾಮೀಣ ಸಮುದಾಯ
    - ಬ) ಮನ್ನೆಯನ ಸಮುದಾಯ
    - ಕ) ವಲಾಸಿ ಸಮುದಾಯ
    - ಡ) ನಗರ ಸಮುದಾಯ
23. ಭಟ್ಕಳ, ಕುಮುಟ, ಕಾರವಾರ, ಬೇಲೆಕೆರೆ, ಹೊನ್ನಾವರ ಮಲ್ಪೆ, ನವಮಂಗಳೂರು ಇವು ಬಂದರುಗಳಾದರೆ, ಮುಳ್ಳಯ್ಯನ ಗಿರಿ, ಕುದುರೆಮುಖ, ರುದ್ರಗಿರಿ, ದೇವಿರಮ್ಮನ ಬೆಟ್ಟ, ಕೊಡಚಾದ್ರಿ, ಬಲ್ಲಾಳರಾಯನ ದುರ್ಗ ಇವು ಗಿರಿಶಿಖರಗಗಳಾದರೆ ಕರ್ನಾಟಕದ ನಯಾಗಾರ ಎಂದು ಕರೆಯುಲ್ಪಡುವ ಜಲಪಾತ ಯಾವುದೇಂದರೆ,
    - ಅ) ಅಬ್ಬೀ ಜಲಪಾತ
    - ಬ) ಗೋಕಾಕ್ ಜಲಪಾತ
    - ಕ) ಮಾಗೋಡು ಜಲಪಾತ
    - ಡ) ಜೊಗ ಜಲಪಾತ
24. ಭಾರತದ ಸಂವಿಧಾನದಲ್ಲಿ 22 ಭಾಗಗಳು 8 ಅನುಸೂಚಿಗಳು ಮತ್ತು 395 ವಿಧಿಗಳು ಇದ್ದು ತಿದ್ದುಪಡಿಯ ನಂತರ 24ಭಗಗಳು 12 ಅನುಸೂಚಿಗಳು 450 ವಿಧಿಗಳನ್ನು ಒಳಗೊಂಡ,
    - ಅ) ಒಂದು ಅಲಿಖಿತ ಸಂವಿಧಾನ
    - ಬ) ಬೃಹತ್ ಸಂವಿಧಾನ
    - ಕ) ನಮ್ಯ ಮತ್ತು ಅನಮ್ಯ ಸಂವಿಧಾನ
    - ಡ) ಲಿಖಿತ ಮತ್ತು ಚಿಕ್ಕ ಸಂವಿಧಾನ

## VI. ಬಿಟ್ಟಿರುವ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ

**4x1=4**

25. ಸಾಂಸ್ಕೃತಿಕ ಬರಡುತನದಿಂದ ಯುರೋಪಿನಲ್ಲಿ_............................ ಯುಗ ಬಂದಿತು.
26. ರೈಲು ಇಂಜಿನನ್ನು ತಯಾರಿಸಿದವರು ...................ಮತ್ತು ..................
27. ರಾಜ್ಯ ಸಭೆಯ ಅದ್ಯಕ್ಷರು ........................
28. ಕಬೀರನ ಅನುಯಾಯಿಗಳನ್ನು ............................ ಕರೆಯುತ್ತಾರೆಂದರೆ,

## VII. 'ಎ' ಪಟ್ಟಿಯಲ್ಲಿರುವ ಅಂಶಗಳಿಗೆ 'ಬಿ' ಪಟ್ಟಿಯಲ್ಲಿ ಕೊಟ್ಟಿರುವ ಸರಿಯಾದ ಉತ್ತರವನ್ನು ಹೊಂದಿಸಿ ಬರೆಯಿರಿ.

**4x1=4**

| | | | |
|---|---|---|---|
| 29 | 1. | ಅಮೇರಿಕಾದ ಸ್ವಾತಂತ್ರ್ಯ | ಆರ್ದ್ರತೆ |
| | 2. | ನಂದಿ ಗಿರಿಧಾಮ | ಮಿಶ್ರಲೋಹ |
| | 3. | ಮ್ಯಾಂಗನೀಶ್ | ಶ್ರೀಗಂಧದ ಮರ |
| | 4. | ಎಲೆಉದುರುವ ಕಾಡು | ಕ್ರಿ. ಶ. 1776 |
| | | | ಚಿಕ್ಕಬಳ್ಳಾಮರ |

## VIII. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಪ್ರತಿಯೊಂದಕ್ಕೂ ಉತ್ತರಿಸಿ

**6x1=6**

30. ಪೃತ್ವಿರಾಜ ಚೌವ್ಹಾಣನು ಮದಲನೆ ತರೈನ್ ಯುದ್ದದಲ್ಲಿ ಯಾರನ್ನು ಸೂಲಿಸಿದನು?
31. ಪ್ರತಿಯೊಬ್ಬ ಮುಸ್ಲಿಮನು ಏನು ಮಾಡಬೇಕು?
32. ಕರ್ನಾಟಕದ ಮಣ್ಣಿನ ವಿಧಗಳು ಯಾವುವು?
33. 8ನೇ ತರಗತಿಯ ಮಿಡ್ನಾಪುರದಲ್ಲಿ ಸಿಕ್ಕ ಅಮಲ ಮತ್ತು ಕಮಲ ಜೀವನ ಗಮನಿಸಿದ ನಂತರ 9ನೇ ತರಗತಿಯಲ್ಲಿ ಸಾಮಾಜೀಕರಣ ಎಂದರೇನು?
34. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನನ್ನು ಯಾರು ನೇಮಿಸುತ್ತಾರೆ?
35. ದ್ವಿ ನಮೂದು ಪದ್ದತಿ ಎಂದರೇನು?

## IX. ಪ್ರಶ್ನೆಗಳಿಗೆ ಎರಡು/ಮೂರು 2/3 ವಾಕ್ಯದಲ್ಲಿ ಪ್ರತಿಯೊಂದಕ್ಕೂ ಉತ್ತರಿಸಿ ( ಐದಕ್ಕೆ ಮಾತ್ರ )

**5x2=10**

36. ಅಪೋಸಲರು ಯಾರು? ಅವರು ಎಷ್ಟುಜನ?
37. ಶ್ರಮ ವಿಭಜನೆ ಎಂದರೇನು? ಅದರ ಅನುಕೂಲಗಳನ್ನು ತಿಳಿಸಿ.
38. ಅಲ್ಪಾವಧಿ ಹಣಕಾಸಿನ ಮೂಲಗಳು ಯಾವುವು?
39. ಕರ್ನಾಟಕದ ವಾಯುಗುಣದ ವಿಧಗಳು ಯಾವುವು? ಬೇಸಿಗೆ ಕಾಲದ ಲಕ್ಷಣಗಳನ್ನು ವಿವರಿಸಿ.

40. ಅಮೇರಿಕ ಯಾವಾಗ ಸ್ವಾತಂತ್ರ್ಯ ಘೋಷಿಸಿತು? ಅದರ ಮೋದಲ ಅದ್ಯಕ್ಷ ಯಾರು?
41. ಕರ್ನಾಟಕದ ವಿಧಾನ ಸಬೆ ಸದಸ್ಯನಾಗಲು ಇರಬೇಕಾದ ಅರ್ಹತೆಗಳು ಯಾವುವು?
42. ನಮ್ಮ ಸೇನೆಯ 3 ವಿಧಗಳು ಯಾವುವು? ಅದರ ಮುಖ್ಯಸ್ಥರುಗಳು ಯಾರು?

**X.. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಆರು 6/8 ವಾಕ್ಯಗಳಲ್ಲಿ ಉತ್ತರಿಸಿರಿ. ( ಮೂರಕ್ಕೆ ಮಾತ್ರ ) 3x3=9**

43. ಈಗ ಹಾಳು ಹಂಪೆಯಾಗಿರುವ ವಿಶ್ವ ಪರಂಪರೆ ವಿಜಯನಗರ ಸಾಮ್ರಾಜ್ಯದ ಕಾಲದ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪ ವಿವರಿಸಿ .
44. ಕುಟುಂಬ ಎಂದರೇನು? ಕುಟುಂಬದ ವಿವಿಧ ಪ್ರಕಾರಗಳು ಯಾವುವು? ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳ ವ್ಯತ್ಯಾಸ ತಿಳಿಸಿ.
45. ಭಾರತದ ಸಂವಿದಾನದ ಪ್ರಮುಖ ಲಕ್ಷಣಗಳಾವುವು?
46. ಭಾರತೀಯ ಅರ್ಥ ವ್ಯವಸ್ಥೆಯ ವಿವಿಧ ವಲಯಗಳು ಯಾವುವು ವಿವರಿಸಿ? ಒಂದೊಂದಕ್ಕು ಉದಾಹರಣೆ ನೀಡಿ.

**XI. ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು 8/10 ವಾಕ್ಯದಲ್ಲಿ ಉತ್ತರಿಸಿರಿ. ( ಎರಡಕ್ಕೆ ಮಾತ್ರ ) 2x4=8**

47. ದಯವೇ ಧರ್ಮದಮೂಲವಯ್ಯ ಎಂದು ಹೇಳಿದ ಬಸವಣ್ಣರವರ ಜೀವನ ಮತ್ತು ಸಾಧನೆಯನ್ನು ತಿಳಿಸಿ
48. ರಾಷ್ಟ್ರಪತಿ ಯಾರು? ಅವರನ್ನು ಹೇಗೆ ಆಯ್ಕೆ ಮಾಡುತ್ತಾರೆ? ಅವರ ಕಾರ್ಯ(ಅಧಿಕಾರ)ಗಳಾವುವು?
49. ಕರ್ನಾಟಕದ ಪ್ರಮುಖ ಪ್ರಾಕೃತಿಕ ವಿಬಾಗಗಳುಯಾವುವು? ಮಲೆನಾಡು ಪ್ರದೇಶದ ಲಕ್ಷಣಗಳನ್ನು ವಿವರಿಸಿ. ಪ್ರಮುಖ ಘಾಟಿಗಳು ಯಾವುವು ತಿಳಿಸಿ.

## C ವಿಭಾಗ (15 ಅಂಕಗಳು)

### (ಜೀವನದಲ್ಲಿ ಅಳವಡಿಕೆ; ಅನ್ವಯಿಸುವಿಕೆ, ಮತ್ತು ವಿಮರ್ಶಾತ್ಮಕ ಚಿಂತನೆ)

**XII. ಈ ಕೆಳಗಿನ ಪ್ರಶ್ನೆಗಳನ್ನು ಓದಿ ಅರ್ಥಮಾಡಿಕೊಂಡು 6/7ವಾಕ್ಯದಲ್ಲಿ ಉತ್ತರಿಸಿರಿ. (ಐದಕ್ಕೆ ಮಾತ್ರ) 5x3=15**

50. ಈ ಕೆಳಗಿ ಅಂಕಿ ಅಂಶಗಳನ್ನು ಮೋಹನ್ ರವರ ಬ್ಯಾಂಕ್ ಖಾತೆಗೆ ತುಂಬಿರಿ.
ದಿನಾಂಕ 2/11/2013 ರಂದು 50,000=00 ರೂಗಳನ್ನು ತುಂಬಲಾಗಿದೆ ಮತ್ತು ದಿನಾಂಕ 18/11/2013 ರಂದು 30,000 ಡ್ರಾ. ಮಾಡಲಾಗಿದೆ.
51. ನೀವು ಒಬ್ಬ ಭಾರತದ ಪ್ರಜೆಯಾಗಿದ್ದು. ಸಂವಿದಾನದಲ್ಲಿರುವ ಎಲ್ಲಾ ಅಂಶಗಳನ್ನು ಅಳವಡಿಸಿಕೋಂಡಿರುತ್ತೀರಿ. ಹಾಗಾದರೆ ಭಾರತದ ಸಂವಿದಾನದ ಪೂರ್ವಪೀಠಿಕೆಯನ್ನು ಇಲ್ಲಿ ಬರೆಯಿರಿ.
52. ನಿಮಗೆ ನೀಡಿರುವ ಬ್ಯಾಂಕ್ ಚಲನ್ನಲ್ಲಿ ನಿರ್ದೇಶಕರು, ಮಕ್ಕಳ ಕಲ್ಯಾಣ ನಿಧಿ, ಗೆ ನೀವು ಸಂಗ್ರಹಿಸಿರುವ 12,000=00 ರೂ ಗಳನ್ನು ಖಾತೆ ಸಂಖ್ಯೆ 28011454534, ಕ್ಕೆ SB ಖಾತೆಗೆ ಜಮಾ ಮಾಡಿರಿ.
53. ಪರಿಸರ ಮಾಲೀನ್ಯವನ್ನು ನೀವು ತಡೆಯಲು ಪ್ರಯತ್ನಿಸುತ್ತೀರಿ. ಯಾವ ಯಾವ ವಸ್ತುಗಳನ್ನು ಬಳಸುವುದನ್ನು ಬಿಡುವುದರ ಮೂಲಕ ಮತ್ತು ಎಷ್ಟು ಗಿಡಗಳನ್ನು ನೆಡುವುದರ ಮೂಲಕ ಪರಿಸರ ಮಾಲಿನ್ಯ ತಡೆಯುವಲ್ಲಿ ಸಹಕರಿಸುತ್ತೀರಿ. ಮಾಹಿತಿ ಹಕ್ಕು ಕಾಯಿದೆಯ ಮೂಲಕ ನಿಮ್ಮ ಊರಿನ ಹತ್ತಿರದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯನ್ನು ಹೇಗೆ ತಡೆಯಲು ಪ್ರಯತ್ನಿಸುತ್ತಿರಿ.
54. ನೀವು ರಾಷ್ಟ್ರೀಯ ಬಾವೈಕ್ಯತೆ ಬೆಳೆಸಲು ಪ್ರಯತ್ನಿಸುತ್ತೀರಿ. ನೀವು ಯಾವ ಯಾವ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುತ್ತೀರಿ ಮತ್ತು ರಾಷ್ಟ್ರೀಯ ಹಬ್ಬಗಳಿಗೆ ಭಾಗವಹಿಸುತ್ತೀರಿ? ಹಾಗೂ ಯಾವ ಯಾವ ರಾಷ್ಟ್ರೀಯ ಲಾಂಛನಗಳನ್ನು ಸಂಗ್ರಹಿಸುತ್ತೀರಿ?
55. ಈ 50 ರೂ ನೋಟನ್ನು ಸುಕ್ಷ್ಮಾಗಿ ಗಮನಿಸಿ ಅದರ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಿರಿ.




1. 50 ರೂ ನ ನೋಟನ್ನು ಯಾರು ಮುದ್ರಿಸುತ್ತಾರೆ?
2. ಭಾರತೀಯ ರಿಸರ್ವ್ ಬ್ಯಾಂಕ್, ಯಾವ ಯಾವ ಅಂದರೆ ಎಷ್ಟು ಎಷ್ಟು ರೂಪಾಯಿಯ ನೋಟುಗಳನ್ನು ಚಲಾವಣೆಗೆ ತರುತ್ತದೆ?
3. ಭಾರತೀಯ ರಿಸರ್ವ್ ಬ್ಯಾಂಕ್‌ನ ಗೌರ್ನರ್ ನ ಮಾದರಿ ಸಹಿ ಮತ್ತು ನೋಟಿನ ಕ್ರಮಸಂಖ್ಯೆ ರಾಷ್ಟ್ರೀಯ ಭಾವೈಕ್ಯತೆಗೆ ಸಂಬಂಧಿಸಿದಂತೆ ಯಾವ ಚಿನ್ನೆಗಳು ಇವೆ?

56. ಮಾರುಕಟ್ಟೆ ನಿರ್ವಹಣೆ ಪಾಠದಲ್ಲಿ ಪರೋಕ್ಷ ಮಾರಾಟದಲ್ಲಿ ನೀವು ವೈಪಾರದಾರರಾಗಿ ವ್ಯಾಪಾರ ಮಾಡುತ್ತಿದ್ದಿರಿ. ಯಾರಿಂದ ,ಯಾರಮೂಲಕ ಹೇಗೆ ಗ್ರಾಹಕರಿಗೆ ವಸ್ತುಗಳನ್ನು ಮುಟ್ಟಿಸುತ್ತೀರಿ ?

## D ವಿಭಾಗ (10 ಅಂಕಗಳು)

(ಕೌಶಲಯುತವಾಗಿ ಮಾಡುವುದು ಹೊಸದನ್ನು ಶೃಷ್ಠಿಸುವುದು)

**XIII. ಈ ಕೆಳಗಿನ ಪ್ರಶ್ನೆಗಳನ್ನು ಓದಿ ಅರ್ಥಮಾಡಿಕೊಂಡು ಕೌಶಲದಿಂದ ಬಿಡಿಸಿ. (ಮೂರಕ್ಕೆ ಮಾತ್ರ)**

**3x3=9**

57. ಭಾರತದ ಅಂದವಾದ ನಕ್ಷೆಯನ್ನು ಬಿಡಿಸಿ ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.

ಅ. ಗೋದಾವರಿ ನದಿ ಆ. ಪಾಣಿಪಟ್ ಇ. ಗೂಂಡ್ವಾನ ಪ್ರದೇಶ

58. ನೀವು ವಿದೇಶಿ ಪ್ರವಾಸ ಹೊರಟಿದ್ದರಿ. **ಶ್ರೀಲಂಕ**ದಿಂದ **ಆಸ್ರೇಲಿಯ**ಕ್ಕೆ ಹೋಗುತ್ತಿರಿ ಅಲ್ಲಿಂದ **ಚೀನಾದ ಬೀಜೀಂಗ್**ಗೆ ಹೋಗುತ್ತೀರಿ ನಂತರ **ಜಪಾನ** ಪ್ರಯಾಣ ನಂತರ **ಲಂಡನ್ ನ ಬಿಡ್ಜ್**ನೋಡುತ್ತಿರಿ ನಂತರ **ದಕ್ಷಿಣ ಆಫ್ರಕಾ** ವಿಕ್ಷಿಸಿ **ಅಮೇರಿಕ**ದ ಗಗನ ಚುಂಬಿ ನಗರ **ನ್ಯೂಯಾರ್ಕ್**ನೀಂದ **ಭಾರತಕ್ಕೆ** ಬರುತ್ತೀರಿ. ನಿಮಗೆ ನೀಡಿರುವ ಪ್ರಪಂಚದ ನಕ್ಷೆಯಲ್ಲಿ ಇವುಗಳನ್ನು ಗುರುತಿಸಿ.

59. ನಮಗೆ ಲಿಯೋನಾರ್ಡೋ–ಡಾ–ವಿಂಚಿ ಬರೆದಿರುವ ಲಾಸ್ಟ್ ಸಪ್ಪರ್ ಮತ್ತು ಮೊನಾಲಿಸ ಚಿತ್ರಗಳಷ್ಟು ರಮಣೀಯ ವರ್ಣಚಿತ್ರಗಳನ್ನು ಬಿಡಿಸಲು ಆಗುತ್ತದೆಯೋ ಇಲ್ಲವೋ ! ಆದರೆ ಪ್ರಪಂಚದ ನಕ್ಷೆ ಬರೆದು ಮೆಗಲನ್ ಹಡಗಿನ ಮೂಲಕ ಪ್ರಪಂಚ ಸುತ್ತಿದ ಮಾರ್ಗವನ್ನು ಗುರುತಿಸಿ.

60. ಭಾರತದ ಅಂದವಾದ ನಕ್ಷೆಯನ್ನು ಬಿಡಿಸಿ ಪ್ರಮುಖ ನದಿಗಳನ್ನು ಗುರುತಿಸಿ.

**XIV.** 61. **ಕರ್ನಾಟಕದ ಭೂಗೋಳ ಶಾಸ್ತ್ರದಲ್ಲಿ ಸಾಕಷ್ಟುಬಾರಿ ಬಂದಿರುವ ಕರ್ನಾಟಕದ ನಕ್ಷೆಯನ್ನು ಕೌಶಲದಿಂದ ಬಿಡಿಸಲು ಪ್ರಯತ್ನಿಸಿ** **1x1=1**

-------ಶುಭವಾಗಲಿ-----